www.ecourtsindia.com www.ecourtsindia.com www.ecourtsindia.com www.ecourtsindia.com www.ecourtsindia.com www.ecourtsindia.com



**CC No. 1411/24 PW- 1**

**ಸಾಕ್ಷಿಯನ್ನು ದಿನಾಂಕಃ 12-06-2025 ರಂದು ಪ್ರಮಾಣೀಕರಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.**
**ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ.ವಿ.ಆರ್. ವಕೀಲರಿಂದಃ**

1. ನಾನು ಸಾಮಾನ್ಯವಾಗಿ ಯಾರಿಗಾದರೂ ಸಾಲ ಕೊಡುವಾಗ ಭದ್ರತೆಗಾಗಿ ಚೆಕ್ ತೆಗೆದುಕೊಳ್ಳುತ್ತೇನೆ. ಲೋನ್ ಅಗ್ರಿಮೆಂಟ್ ಅಥವಾ ಪ್ರಾಮಿಸರಿ ನೋಟ್ ಕೊಟ್ಟರೆ ಅದನ್ನು ತೆಗೆದುಕೊಳ್ಳುತ್ತೇನೆ. ನಾನು ಎಷ್ಟು ಜನಕ್ಕೆ ಸಾಲ ಕೊಟ್ಟಿದ್ದೇನೆ ಎಂದು ನನಗೆ ನೆನಪಿಲ್ಲ. ನಾನು ಬಡ್ಡಿ ವ್ಯವಹಾರ ಮಾಡಲು ಪರವಾನಗಿ ತೆಗೆದುಕೊಂಡಿಲ್ಲ. ಆರೋಪಿಯು ಚೆಕ್ ಕೊಟ್ಟು ಸಾಲವನ್ನು ಮರುಪಾವತಿ ಮಾಡುತ್ತೇನೆ ಎಂದಿದ್ದರು. ರೂ. 25 ಸಾವಿರಕ್ಕಿಂತ ಹೆಚ್ಚಿನ ಹಣವನ್ನು ಚೆಕ್ ಅಥವಾ ಡಿಡಿ ಮೂಲಕ ಕೊಡಬೇಕು ಎಂಬ ಮಾಹಿತಿ ನನಗೆ ಇದೆ. ರೂ. 3,30,000/- ಚೆಕ್ ಮೂಲಕ ಕೊಡಲು ತೊಂದರೆ ಇರಲಿಲ್ಲ ಎಂದರೆ ಆರೋಪಿಯ ಪತ್ನಿ, ಬಸವರಾಜ ಮತ್ತು ಅನುಸೂಯಾ ರವರು ನಗದು ರೂಪದಲ್ಲಿ ಹಣ ಬೇಕು, ಆರೋಪಿಯ ಖಾತೆಗೆ ಹಣ ಹಾಕಿದ್ದಲ್ಲಿ ಅವರು ದುರುಪಯೋಗಪಡಿಸಿಕೊಳ್ಳುತ್ತಾರೆ ಎಂದು ಹೇಳಿದ್ದರಿಂದ ನಗದು ರೂಪದಲ್ಲಿ ಕೊಟ್ಟಿರುತ್ತೇನೆ. ಸದರಿ 3 ಜನರ ಸಮಕ್ಷಮ ಸದರಿ ಹಣ ಕೊಟ್ಟಿರುತ್ತೇನೆ. ಈ ವಿಷಯವನ್ನು ದೂರಿನಲಿ ನಮೂದಿಸಿಲ್ಲ ಎಂದರೆ ಸರಿ. ಸದರಿ 3 ಜನರು ಆರೋಪಿಯ ಪರಿವಾಗಿ ಭರವಸೆ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ.

2. ಸೈಟುಗಳನ್ನು ಮಾರಾಟ ಮಾಡುವ ಬ್ರೋಕರ್ ಕೆಲಸವನ್ನು ಡಿ. ಸುರೇಶ್ ಮತ್ತು ಎನ್. ಸುರೇಶ್ ರವರು ಮಾಡುತ್ತಿದ್ದರು. ಸದರಿ ವ್ಯವಹಾರಕ್ಕೆ ಹಣ ಬೇಕು ಎಂದು ಪಡೆದುಕೊಂಡು ನನಗೆ ಲಾಭಾಂಶ ಕೊಟ್ಟಿರುವುದಿಲ್ಲ, ಮೋಸ ಮಾಡಿರುತ್ತಾರೆ. ಸದರಿ ಕಚೇರಿ ರಾಜಾಜಿನಗರದಲ್ಲಿ ಇರುತ್ತದೆ. ಆ ರೀತಿ ಲಾಭಾಂಶ ಕೊಡುತ್ತೇವೆ ಎಂದು ಅವರು ನನಗೆ ಹೇಳಿಲ್ಲ ಎಂದರೆ ಸರಿಯಲ್ಲ. ನಾನು ಆದಾಯ ತೆರಿಗೆ

This is a True Copy of the Court Records Online. Authenticated @ districts.ecourtsindia.com/cnr/KABC030028522024/truecopy/order-2.pdf

ಕಟ್ಟುತ್ತೇನೆ. 10ವರ್ಷಗಳಿಂದಲೂ ನಾನು ತೆರಿಗೆ ಕಟ್ಟುತ್ತಿದ್ದೇನೆ. 2021 ರಿಂದ 2024ರವರೆಗಿನ ನನ್ನ ಐಟಿ ರಿಟರ್ನ ದಾಖಲಾತಿಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ. ಆರೋಪಿಗೆ ಕೊಟ್ಟಿದ್ದೇನೆ ಎಂದು ಹೇಳುವ ಹಣವನ್ನು ಆದಾಯ ತೆರಿಗೆಯಲ್ಲಿ ತೋರಿಸಿದ್ದೇನೆ. ಯಾವ ವರ್ಷ ತೋರಿಸಿದ್ದೇನೆ ಎಂದರೆ ಈಗ ಹೇಳಲು ಬರುವುದಿಲ್ಲ. ಸದರಿ ದಾಖಲಾತಿಯನ್ನು ಹಾಜರುಪಡಿಸುತ್ತೇನೆ.

3. ಚೆಕ್ಕು ಅಮಾನ್ಯಗೊಂಡ ಬಗ್ಗೆ ಆರೋಪಿಗೆ ತಿಳಿಸಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ನೋಟಿಸು ತಲುಪಿಲ್ಲ ಎಂದರೆ ಸಾಕ್ಷಿಯು ಅವರು ನಿರಾಕರಿಸಿರುತ್ತಾರೆ ಎನ್ನುತ್ತಾರೆ. ಆರೋಪಿಯು ನೋಟಿಸು ನಿರಾಕರಿಸಿಲ್ಲ ಮತ್ತು ನಾನು ಸುಳ್ಳು ವಿಳಾಸಕ್ಕೆ ನೋಟಿಸು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನೋಟಿಸು ತಲುಪಿದಲ್ಲಿ ಆರೋಪಿ ಉತ್ತರ ಕೊಡುತ್ತಿದ್ದರು ಎಂದರೆ ಅವರು ನೋಟಿಸು ತೆಗೆದುಕೊಂಡಿಲ್ಲ ಎನ್ನುತ್ತಾರೆ. ನಿಡಿ2ರಲ್ಲಿ ಕೇಳಿರುವ ಹಣ ಮತ್ತು ಲೀಗಲ್ ನೋಟಿಸಿನಲ್ಲಿ ಕೇಳಿರುವ ಹಣ ಬೇರೆ ಬೇರೆ. ನಿಡಿ 2ಕ್ಕೆ ಸಂಬಂದಿಸಿದಂತೆ ಪ್ರತ್ಯೇಕ ಪ್ರಕರಣ ಮಾಡಿದ್ದೇನೆ. ಸದರಿ ಪ್ರಕರಣ Small Causes Court ನಲ್ಲಿ ಇದ್ದು ಅದರಲ್ಲಿ ಇದೇ ವಕೀಲರು ರಾಜಿ ಪತ್ರ ಹಾಕಿರುತ್ತಾರೆ. ಸದರಿ ರಾಜಿಯನ್ನು ರೂ. 50 ಸಾವಿರಕ್ಕೆ ಮಾಡಿಕೊಂಡಿದ್ದೇನೆ ಎಂದರೆ ನೆನಪಿಲ್ಲ. ಈ ಪ್ರಕರಣದ ಆರೋಪಿ ಸದರಿ ಪ್ರಕರಣದಲ್ಲಿ ಪಕ್ಷಗಾರನಲ್ಲ ಎಂದರೆ ಸರಿ. ನಿಡಿ 2 ರ ಆದಾರದ ಮೇಲೆ ಎನ್. ಸುರೇಶ್ ರವರ ಮೇಲೆ ಪ್ರಕರಣ ಮಾಡಿಲ್ಲ, ಕಾರಣ ಅವರು ಹಣ ವಾಪಸ್ಸು ಕೊಡುತ್ತೇನೆ ಎಂದು ಹೇಳಿದ್ದರು.

**4.** ಆರೋಪಿ ನನ್ನ ಬಳಿ ರೂ. 1 ಲಕ್ಷ ಅಥವಾ ರೂ. 4 ಲಕ್ಷ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನವೆಂಬರ್ 2021ರಲ್ಲಿ ಆರೋಪಿ ನನಗೆ ರೂ. 40 ಸಾವಿರ

This is a True Copy of the Court Records Online. Authenticated @ districts.ecourtsindia.com/cnr/KABC030028522024/truecopy/order-2.pdf

ಸಾಲ ಕೇಳಿದ್ದರು ಎಂದರೆ ಸಾಕ್ಷಿಯು ರೂ. 4 ಲಕ್ಷದ ಪೈಕಿ ರೂ.40 ಸಾವಿರ ಕೊಡಿ ಎಂದು ಕೇಳಿರುತ್ತಾರೇ ಎನ್ನುತ್ತಾರೆ.

**(ನ್ಯಾಯಾಲಯದ ಸಮಯಾವಕಾಶ ಮುಗಿದಿದ್ದು ಪಾಟೀ ಸವಾಲನ್ನು ಮುಂದೂಡಲಾಯಿತು)**

**(ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇದೆ**

16**ನೇ ಅಪರ ಮು ಮ ದಂ ಬೆಂ ನಗರ**.

This is a True Copy of the Court Records Online. Authenticated @ districts.ecourtsindia.com/cnr/KABC030028522024/truecopy/order-2.pdf